**ಓ ಎಸ್ ನಂಃ 175/2023 ಪಿ ಡಬ್ಲೂಃ1 ಶ್ರೀ ಮಂಜುನಾಥ**

ದಿನಾಂಕಃ 09/09/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ</u>

2. ಈ ದಾವೆಯನ್ನು ನಾನು ಹಾಗೂ ನನ್ನ ತಾಯಿ ಪ್ರತಿವಾದಿಯರ ಮೇಲೆ ಹಾಕಿದ್ದೇವೆ. ಪರಶುರಾಮ ಡೊಗ್ಗಳ್ಳಿ ಜೀವಂತವಿಲ್ಲ. ಸದರಿಯವರು 2 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ಈ ಕೇಸ ಹಾಕುವ ಕಾಲಕ್ಕೆ ಪರಶುರಾಮ ಜೀವಂತವಿರಲಿಲ್ಲ. ಪರಶುರಾಮನಿಗೆ ಹೆಂಡತಿ ಹಾಗೂ ಮಕ್ಕಳು ಇದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನೀವು ವಿಚಾರ ಮಾಡಿದ್ದೀರಾ ಎಂದರೆ ಇಲ್ಲ. ದಾವಾ ಬರೆಯಲು ಮಾಹಿತಿಯನ್ನು ನಾನು ಹಾಗೂ ನನ್ನ ತಾಯಿ ಕೊಟ್ಟಿದ್ದೇವೆ. ನನ್ನ ತಾಯಿ ಗೃಹಿಣಿ. ನನ್ನ ತಾಯಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇದೆ. ಈ ಕೇಸ ಹಾಕುವಾಗ ನನ್ನ ತಾಯಿ ನ್ಯಾಯಾಲಯಕ್ಕೆ ಬಂದಿದ್ದಳು. ಆಗ ತೊಂದರೆ ಇತ್ತಾ ಎಂದರೆ ಇಲ್ಲ. ನನ್ನ ತಾಯಿಗೆ 85 ವರ್ಷ ವಯಸ್ಸು. ನನಗೆ 38 ವರ್ಷ ವಯಸ್ಸು. ದಾವಾ ಹಾಕುವ ಕಾಲಕ್ಕೆ ವಕೀಲರಿಗೆ ನನ್ನ ಹಾಗೂ ನನ್ನ ತಾಯಿಯ ವಯಸ್ಸನ್ನು ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ. ವಾದ ಪತ್ರದಲ್ಲಿ ನನ್ನ ತಾಯಿ ವಯಸ್ಸು 60 ವರ್ಷ ವಯಸ್ಸು ನಮೂದಿದೆ ಎಂದರೆ ಸರಿ. ಪ್ರತಿವಾದಿ ನನ್ನ ತಾಯಿಗಿಂತ ಚಿಕ್ಕವನು. ಆತನಿಗೆ ಕೇಸ ಹಾಕುವಾಗ ಎಷ್ಟು ವಯಸ್ಸಿತ್ತು ಎಂದು ನನಗೆ ಗೊತ್ತಿಲ್ಲ. ಕೇಸ ಹಾಕುವಾಗ ವಕೀಲರಿಗೆ ಆತನ ವಯಸ್ಸಿನ ಮಾಹಿತಿ ಕೊಟ್ಟಿದ್ದೀರಾ ಎಂದರೆ ಇಲ್ಲ. ಆತ ನನಗಿಂತ ವಯಸ್ಸಿನಲ್ಲಿ ದೊಡ್ಡವನು. ಎಷ್ಟು ವರ್ಷ ದೊಡ್ಡವನು ಎಂದು ಗೊತ್ತಿಲ್ಲ. ವಾದ ಪತ್ರದಲ್ಲಿ ಪ್ರತಿವಾದಿಯ ವಯಸ್ಸು 36 ವರ್ಷ ನಮೂದಿದೆ ಎಂದರೆ ಸರಿ.

3. ನನಗೆ ಕಿವಿ ಕೇಳುವುದಿಲ್ಲ. ಒಂದು ವರ್ಷದಿಂದ ತೊಂದರೆ ಇದೆ. ಈ ಸಂಬಂಧ ಆಸ್ಪತ್ರೆಗೆ ತೋರಿಸಿದ್ದೀರಾ ಎಂದರೆ ಇಲ್ಲ. ಕಿವಿ ಕೇಳುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಎರಡು ಹೊಲಗಳ ಬಗ್ಗೆ ಕೇಸ ಹಾಕಿದ್ದೇನೆ. ಸದರಿ ಎರಡು ಹೊಲಗಳ ಸರ್ವೇ ನಂಬರ 157/8 ಕ್ಷೇತ್ರ 25 ಗುಂಟೆ ಚಕಬಂದಿ ಪೂರ್ವಕ್ಕೆ ಪ್ರತಿವಾದಿ ಜಮೀನು, ಪಶ್ಚಿಮಕ್ಕೆ ಫಕೀರಪ್ಪ ಡೊಗ್ಗಳ್ಳಿ ಅವರ ಜಮೀನು, ಉತ್ತರಕ್ಕೆ ಚಾಕಲಬ್ಬಿ ಅವರ ಜಮೀನು ಮತ್ತು ದಕ್ಷಿಣಕ್ಕೆ ಪ್ಯಾಟಿ ಅವರ ಹೊಲ. 42/8 ಕ್ಷೇತ್ರ 01 ಎಕರೆ 20 ಗುಂಟೆ ಚಕಬಂದಿ ಪೂರ್ವಕ್ಕೆ ಪ್ರತಿವಾದಿ ಜಮೀನು, ಪಶ್ಚಿಮಕ್ಕೆ ಬಸವಣ್ಣೆಪ್ಪ ಡೊಗ್ಗಳ್ಳಿ ಅವರ ಜಮೀನು, ಉತ್ತರಕ್ಕೆ ನೀರಾನ್ನವರ

ಅವರ ಜಮೀನು ಮತ್ತು ದಕ್ಷಿಣಕ್ಕೆ ಗುಡಗೇರಿ ಅವರ ಹೊಲ ಇದೆ. ಈ ಎರಡು ಜಮೀನುಗಳ ನಮ್ಮವು. ಸದರಿ ಜಮೀನುಗಳು ನ್ಯಾಯಾಲಯದಲ್ಲಿ ಆದ ವಾಟ್ನಿಯಲ್ಲಿ ಬಂದಿದೆ. ಈ ಎರಡೇ ಆಸ್ತಿಗಳ ಬಗ್ಗೆ ದಾವಾ ಹಾಕಿದ್ದೇವೆ. ಬೇರೆ ಹೊಲಗಳಿವೆಯಾ ಎಂದರೆ ಇಲ್ಲ. ಯಾವ ಕೇಸನಿಂದ ಹೊಲಗಳು ಬಂದಿವೆ ಎಂದರೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ನಿಖಾಲಿಯಾದ ದಾವಾದ ದಾಖಲೆಗಳನ್ನು ಕೊಟ್ಟಿದ್ದೀರಾ ಎಂದರೆ ವಕೀಲರಿಗೆ ಕೊಟ್ಟಿದ್ದೇನೆ. ನಾನು ಪಿ ಯು ಸಿ ವರೆಗೆ ಓದಿದ್ದೇನೆ. ನ್ಯಾಯಾಲಯದ ಆದೇಶದ ಪ್ರಕಾರ ದಾವಾ ಜಮೀನು ಬಂದಿದೆ ಎಂದು ದಾವಾ ತಯಾರು ಮಾಡುವಾಗ ವಕೀಲರಿಗೆ ಹೇಳಿದ್ದೀರಾ ಎಂದರೆ ಹೇಳಿದ್ದೇನೆ. ನ್ಯಾಯಾಲಯದ ಆದೇಶವನ್ನು ಹಾಜರು ಪಡಿಸಲು ತೊಂದರೆ ಇಲ್ಲ.

4. ಕಳಸ ಗ್ರಾಮದಲ್ಲಿ ನಮ್ಮ ಮನೆಯಿದೆ. ಸದರಿ ಮನೆಯ ನಂಬರ ನನಗೆ ನೆನಪಿಲ್ಲ. ನಮ್ಮ ಮನೆಯ ಅಳತೆ ಹೇಳಲಾಗುತ್ತದೆಯಾ ಎಂದರೆ ಗೊತ್ತಿಲ್ಲ. ಅದರ ಚಕಬಂದಿ ಪೂರ್ವಕ್ಕೆ ಸರಕಾರಿ ರಸ್ತೆ, ಪಶ್ಚಿಮಕ್ಕೆ ಮರ್ದಾನಿ ಅವರ ಮನೆ, ಉತ್ತರಕ್ಕೆ ಶಿವಲಿಂಗಪ್ಪ ಕುಂದಗೋಳ ಅವರ ಮನೆ ಮತ್ತು ದಕ್ಷಿಣಕ್ಕೆ ಮಹಾಂತೇಶ ಡೊಗ್ಗಳ್ಳಿ ಅವರ ಮನೆಯಿದೆ. ಸದರಿ ಮನೆ ಮತ್ತು ಹಿತ್ತಲು ಆಸ್ತಿ ಮಾರುಕಟ್ಟೆ ಮೌಲ್ಯ 2023 ರಲ್ಲಿ ಸುಮಾರು 7 ಲಕ್ಷ ಇತ್ತು. ನನಗೆ ಇದೊಂದೆ ಮನೆ ಮತ್ತು ಹಿತ್ತಲುಯಿದೆ. ನಾನು ದಾವಾ ಆಸ್ತಿಗಳ ವಿವರವನ್ನು ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಮಾಲ್ಕಿ ಕಬ್ಜಾದಲ್ಲಿದೆ. ನನ್ನ ತಂದೆಯ ಹೆಸರು ಅಖಂಡಪ್ಪ ಅವರು 2007 ರಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರಿಗೆ ನಾನೊಬ್ಬನೇ ಮಗ. ದಾವಾ ಆಸ್ತಿಗಳು ವಾದಿಯರಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

5. ಪ್ರತಿವಾದಿ ಸಲ್ಲಿಸಿದ ತಕರಾರನ್ನು ಓದಿಸಿ ನೋಡಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಗಳು ನ್ಯಾಯಾಲಯದ ಡಿಕ್ರಿ ಪ್ರಕಾರ ನನ್ನ ಹಿಸ್ಸೇಗೆ ಬಂದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ಹಿಸ್ಸಾದಲ್ಲಿ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಚಿಕ್ಕಪ್ಪ. ಹಿರಿಯರಿಂದ ನಮ್ಮ ಮನೆತನಕ್ಕೆ ಎಷ್ಟು ಮನೆಗಳು ಬಂದಿವೆ ಎಂದರೆ ಮೂರು ಮನೆ ಬಂದಿವೆ. ಸದರಿ ಮೂರು ಮನೆಗಳಲ್ಲಿ ಒಂದು ಮನೆ ಫಕೀರಪ್ಪ ಡೊಗ್ಗಳ್ಳಿ, ಇನ್ನೊಂದು ಅಖಂಡಪ್ಪ ಡೊಗ್ಗಳ್ಳಿ ಮತ್ತೊಂದು ಬಸವಣ್ಣೆಪ್ಪ ಡೊಗ್ಗಳ್ಳಿ ಅವರ ಹಿಸ್ಸಾಕ್ಕೆ ಬಂದಿದೆ. ಹಿಸ್ಸಾ ಪತ್ರ ಇದೆಯಾ ಎಂದರೆ ಇದೆ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಾನು ಹುಟ್ಟುವ ಮೊದಲೇ ಈ ಮೇಲಿನ ಹಿಸ್ಸಾ ಆಗಿದೆ. ಪೂರ್ವಾಭಿಮುಖವಾಗಿ ಯಾವುದೇ ಮನೆ ಇಲ್ಲ. ಪೂರ್ವಾಭಿಮುಖವಾಗಿ ಒಂದು ಮನೆಯಿದೆ ಎಂದರೆ ಸರಿಯಲ್ಲ. ಸದರಿ ಮನೆಯ ಪೂರ್ವಕ್ಕೆ ಸರಕಾರಿ ರಸ್ತೆ ಇದೆ ಎಂದರೆ

ಸರಿ. ಪಶ್ಚಿಮಕ್ಕೆ ಹಿತ್ತಲು ದಾಟಿ ಮರ್ದಾನಿ ಅವರ ಆಸ್ತಿ ಇದೆ ಎಂದರೆ ಸರಿ, ಉತ್ತರಕ್ಕೆ ಸೋಮಲಿಂಗ ಕುಂದಗೋಳ ಅವರ ಆಸ್ತಿ ಇದೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಬಸವಂತಪ್ಪ ಗೋಗೆಪ್ಪನ್ನವರ ಅವರ ಆಸ್ತಿ ಇದೆ ಎಂದರೆ ಸರಿಯಲ್ಲ. ನನ್ನ ಪ್ರಕಾರವಾಗಿ ಮಹಾಂತೇಶ ಡೊಗ್ಗಳ್ಳಿ ಅವರ ಮನೆಯಿದೆ. ಸದರಿ ಮನೆಯಲ್ಲಿ ದಕ್ಷಿಣದ ಕಡೆಗೆ ಪೂರ್ವ ಮತ್ತು ಪಶ್ಚಿಮವಾಗಿ 10 ಅಡಿ ಅಗಲದ ಸಾಮೂಹಿಕ ಹುಸಿ ದಾರಿ ಇದೆ ಎಂದರೆ ಸರಿಯಲ್ಲ. ಆ ಮನೆಯ ಮುಂಬಾಗಿಲ ಕಡೆ ಫಕೀರಪ್ಪ ಬಸಪ್ಪ ಡೊಗ್ಗಳ್ಳಿ ಉರ್ಫ್ ಗೋನೆಪ್ಪನ್ನವರ ಇವರ ಹಿಸ್ಸಾದ ಮನೆಯಿದೆ ಎಂದರೆ ಸರಿಯಲ್ಲ. ಪಶ್ಚಿಮದ ಕಡೆಗೆ ಅಖಂಡಪ್ಪ ಅವರ ಹಿಸ್ಸಾದ ಮನೆಯಿಂದೆ ಎಂದರೆ ಸರಿಯಲ್ಲ. ಅದರ ಪಶ್ಚಿಮಕ್ಕೆ ಪ್ರತಿವಾದಿ ಹಿಸ್ಸಾದ ಮನೆಯಿದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆ ದಾಟಿ ಪಶ್ಚಿಮಕ್ಕೆ ಬಸವಣ್ಣೆಪ್ಪ ಬಸಪ್ಪ ಡೊಗ್ಗಳ್ಳಿ ಅವರ ಹಿಸ್ಸಾದ ಮನೆಯಿದೆ ಎಂದರೆ ಸರಿಯಲ್ಲ. ಬಸವಣ್ಣೆಪ್ಪನ ಮನೆ ದಾಟಿ ಪಶ್ಚಿಮಕ್ಕೆ ಹಿತ್ತಲು ಇದೆ ಎಂದರೆ ಸರಿಯಲ್ಲ. ಹಳೆ ಮನೆಗೆ ಹಿತ್ತಲು ಇದೆಯೋ ಇಲ್ಲವೋ ಎಂದರೆ ಇದೆ. ಪಶ್ಚಿಮಕ್ಕೆ ಇದೆ. ಅದರಲ್ಲಿ ಹಿಸ್ಸಾ ಆಗಿದೆಯಾ ಎಂದರೆ ಸರಿಯಲ್ಲ. ಸಂಪೂರ್ಣ ಮನೆ ಮತ್ತು ಹಿತ್ತಲು ನನ್ನದೇ ಎಂದು ನುಡಿಯುತ್ತಾರೆ. ವಸ್ತು ಸ್ಥಿತಿ ಮುಚ್ಚಿಟ್ಟು ಸುಳ್ಳು ದಾವಾ ಹಾಕಿದ್ದೇನೆ ಎಂದರೆ ಸರಿಯಲ್ಲ.

6. ಡೊಗ್ಗಳ್ಳಿ ಅವರ ಮನೆತನಕ್ಕೆ ಸಂಬಂಧಪಟ್ಟಂತೆ ಜಿ ಪಿ ನಂಬರ 475 ಮತ್ತು ಮನೆ ಮತ್ತು ಹಿತ್ತಲು ಇದೆ. ಅದರ ಅಳತೆ ಹಾಗೂ ಚಕಬಂದಿ ಹೇಳಲಾಗುತ್ತದೆಯಾ ಎಂದರೆ ಗೊತ್ತಿಲ್ಲ. ಸದರಿ ಮನೆ ಡೊಗ್ಗಳ್ಳಿ ಮನೆತನಕ್ಕೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ಯಾರ ಕಬ್ಜಾದಲ್ಲಿದೆ ಎಂದರೆ ನನ್ನ ಕಬ್ಜಾದಲ್ಲಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ನಾನು ಖರೀದಿ ಹಿಡಿದಿದ್ದೇನೆ. ನಿಪಿ. 3 ಮತ್ತು 4 ರ ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿ ಮಧ್ಯೆ ಆದ ಕ್ರಿಮಿನಲ್ ಪ್ರಕರಣದಲ್ಲಿ ಪೋಲೀಸರು 'ಬಿ' ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ.

7. ನಾನು ಖರೀದಿ ಹಿಡಿದ ಆಸ್ತಿಯ ಮನೆ ನಂಬರ, ಚಕಬಂದಿ ಮತ್ತು ಅಳತೆ ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಮನೆ ನಂಬರ 475. ಅಳತೆ ಗೊತ್ತಿಲ್ಲ. ಚಕಬಂದಿ ಪೂರ್ವಕ್ಕೆ ಸರಕಾರಿ ರಸ್ತೆ, ಪಶ್ಚಿಮಕ್ಕೆ ಮರ್ದಾನಿ ಅವರ ಹಿತ್ತಲು, ಉತ್ತರಕ್ಕೆ ನಮ್ಮದೇ ಮನೆ ಮತ್ತು ದಕ್ಷಿಣಕ್ಕೆ ಮಹಾಂತೇಶ ಡೊಗ್ಗಳ್ಳಿ ಅವರ ಮನೆ ಇದೆ. ಸದರಿ ಮನೆಯನ್ನು ಫಕೀರಪ್ಪ ಡೊಗ್ಗಳ್ಳಿ ಅವರಿಂದ ಖರೀದಿ ಮಾಡಿದ್ದೇನೆ. ಅವರು ನನ್ನ ದೊಡ್ಡಪ್ಪ. ಅವರು ಸದರಿ ಆಸ್ತಿಯನ್ನು ಖರೀದಿ ಮಾಡಿದ್ದರು. ಆ ಸಂಬಂಧ ಖರೀದಿ ಪತ್ರ ಹಾಜರು ಪಡಿಸಿದ್ದೇನೆ. ಮನ ನಂಬರ 475 ನಮ್ಮ ಪಿತ್ರಾರ್ಜಿತ

ಆಸ್ತಿಗಳಲ್ಲಿ ಒಂದು ಎಂದರೆ ಸರಿ. ಫಕೀರಪ್ಪನಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ. ಫಕೀರಪ್ಪ ನನ್ನ ತಂದೆಯ ಸ್ವಂತ ಅಣ್ಣ. ಸದರಿ ಮನೆ ರೂ. 3 ಲಕ್ಷಕ್ಕೆ ಖರೀದಿ ಮಾಡಿದ್ದೇವೆ. ನೋಂದ ಆಗುವ ಕಾಲಕ್ಕೆ ರೂ. 3 ಲಕ್ಷ ಹಣ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಕೊಟ್ಟಿದ್ದೇವೆ. ಸದರಿ ಮನೆ ಫಕೀರಪ್ಪ ಒಬ್ಬನಿಗೆ ಸಂಬಂಧಪಟ್ಟ ಆಸ್ತಿಯಲ್ಲ ಎಂದರೆ ಸರಿಯಲ್ಲ. ಫಕೀರಪ್ಪ ಯಾರಿಂದಲೂ ಖರೀದಿ ಮಾಡಿಲ್ಲ ಎಂದರೆ ಸರಿ. ಈ ಪಿತ್ರಾರ್ಜಿತ ಆಸ್ತಿಯಲ್ಲಿ ಎಲ್ಲ ಸಹೋದರರರಿಗೂ ಹಕ್ಕಿದೆ ಎಂದರೆ ಸರಿ. ಮೂಲ ಕ್ರಯ ಪತ್ರ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಪ್ರತಿವಾದಿಗೆ ಹಾಗೂ ಉಳಿದ ಸಹೋದರರಿಗೆ ಹಾನಿ ಮಾಡಬೇಕೆಂದು ನಿಪಿ. 5 ನ್ನು ಖೊಟ್ಟಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮನೆ ನಂಬರ 475 ರ ಸಂಬಂಧ ಹಿಸ್ಸಾ ಆಗಿದೆಯಾ ಎಂದರೆ ಇಲ್ಲ. ಪ್ರತಿವಾದಿ ಹಾಗೂ ಉಳಿಕೆ ಮನೆತನದ ಸದಸ್ಯರ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನನ್ನ ಹಾಗೂ ಪ್ರತಿವಾದಿ ಮಧ್ಯೆ ದಾವಾ ಹಾಕುವ ಪೂರ್ವದಲ್ಲಿ ತಂಟೆ ಆಗಿತ್ತಾ ಎಂದರೆ ಆಗಿತ್ತು. ದಿನಾಂಕ 25-07-2023 ರಲ್ಲಿ ಪ್ರತಿವಾದಿ ಮತ್ತು ಆತನ ಮಗ ಪರಶುರಾಮ ರಾತ್ರಿ ಮನೆಗೆ ಬಂದು ಬಾಗಿಲು ಒಡೆದು ಗಲಾಟೆ ಮಾಡಿರುತ್ತಾರೆ. ದಾವೆಯನ್ನು ಯಾವ ದಿನಾಂಕ ಸಲ್ಲಿಸಿದ್ದೀರಾ ಎಂದರೆ ಡಿಸೆಂಬರ 2023 ರಲ್ಲಿ ಹಾಕಿದ್ದೇನೆ. ದಿನಾಂಕ ನೆನಪಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಹೊಲದ ಬಗ್ಗೆ ಘಟನೆ ಆಗಿದೆ. ದಿನಾಂಕ ನೆನಪಿಲ್ಲ. ಫಕೀರಪ್ಪ ಜೀವಂತವಿದ್ದಾರೆ. ಆತನ ಸಾಕ್ಷಿ ಮಾಡಿಸುತ್ತೀರಾ ಎಂದರೆ ಮಾಡಿಸುತ್ತೇನೆ. ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ